RNU AIR DHARWAD

AUGUST 09, 2025

**AKASHAVANI - DHARWAD**

**PRADESH SAMACHARA (KANNADA) 7.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಬಳ್ಳಾರಿಯಲ್ಲಿ ಮೆಗಾ ಡೇರಿ ಸ್ಥಾಪನೆ; ರಾಜ್ಯ ಗಣಿ ಪರಿಸರ ಪುನಃಶ್ಚೇತನ ನಿಗಮದಿಂದ, ಅನುದಾನ.**
- **18 ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ, ರಾಜ್ಯ ಸರ್ಕಾರದಿಂದ, ಬೆಂಬಲ ಬೆಲೆ: 6 ಲಕ್ಷ 11 ಸಾವಿರ ರೈತರಿಗೆ, ಯೋಜನೆ ಲಾಭ.**
- **ರೈತರಿಗೆ, ರಸಗೊಬ್ಬರದ ಸಕಾಲಿಕ ಪೂರೈಕೆ ಖಾತ್ರಿ ಪಡಿಸಲು, ಕೃಷಿ ಇಲಾಖೆಯಿಂದ, ಯೋಜಿತ ಕ್ರಮ.**
- **ಇಂದು ಶ್ರಾವಣ ಹುಣ್ಣಿಮೆ; ನಾಡಿನಾದ್ಯಂತ ರಕ್ಷಾ ಬಂಧನದ ಸಂಭ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಜಿಲ್ಲೆಗಳ, ಹಾಲು ಉತ್ಪಾದಕ ಸಹಕಾರ ಸಂಘಗಳ ಒಕ್ಕೂಟಕ್ಕಾಗಿ, ಬಳ್ಳಾರಿಯಲ್ಲಿ ಕೊಳಗಲ್ಲು ಬಳಿ, 15 ಎಕರೆ ಜಮೀನನ್ನು, 2 ಕೋಟಿ 92 ಲಕ್ಷ ರೂಪಾಯಿ ವೆಚ್ಚದಲ್ಲಿ, ಖರೀದಿಸಲಾಗುವುದು ಎಂದು, ಒಕ್ಕೂಟದ ಅಧ್ಯಕ್ಷ ರಾಘವೇಂದ್ರ ಹಿಟ್ನಾಳ ತಿಳಿಸಿದ್ದಾರೆ. ಬೃಹತ್ ಡೇರಿ ಸ್ಥಾಪನೆಗೆ ನಿಗದಿ ಪಡಿಸಿರುವ ಕೊಳಗಲ್ಲಿಗೆ ಭೇಟಿ ನೀಡಿ, ಅವರು ಪರಿಶೀಲಿಸಿದರು. ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮ, ಕೆ.ಎಂ.ಇ.ಆರ್.ಸಿ ಡೇರಿ ನಿರ್ಮಾಣಕ್ಕೆ, 80 ಕೋಟಿ ರೂಪಾಯಿ ಅನುದಾನ ನೀಡಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸದ್ಯದಲ್ಲೇ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ, ಎಂದರು.**

<><><>

ಕೃಷಿ ಮತ್ತು ತೋಟಗಾರಿಕೆಯ, 12 ದಶಾಂಶ 3-7 ಮೆಟ್ರಿಕ್ ಟನ್ ನಷ್ಟು, 18 ಉತ್ಪನ್ನಗಳನ್ನು, 6 ಲಕ್ಷದ 11 ಸಾವಿರ ರೈತರಿಂದ ಖರೀದಿಸಿ, ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ನೇರವಾಗಿ, ಫಲಾನುಭವಿ ಖಾತೆಗೆ ಹಣ ಪಾವತಿಸಲಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯ ಸ್ವಾಮಿ ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ಬೆಂಬಲ ಬೆಲೆ ಯೋಜನೆ ಅಡಿ, ಮಾವು ಖರೀದಿಗೆ ಪ್ರಥಮ ಬಾರಿ, ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. 14 ಸಾವಿರದ 993 ರೈತರಿಂದ, 10 ಲಕ್ಷದ 24 ಕ್ವಿಂಟಾಲ್ ಮಾವು ಬೆಳೆ, 41 ಕೋಟಿ 35 ಲಕ್ಷ ರೂಪಾಯಿಗೆ, ಖರೀದಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ರಾಗಿ, ಹತ್ತಿ, ಬಿಳಿ ಜೋಳ, ತೊಗರಿಯಂತಹ ಬೆಳೆಗಳಿಗೂ ಬೆಂಬಲ ಬೆಲೆ ಒದಗಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ, ಶೇಕಡ 60 ರಷ್ಟು ಖರೀದಿ ಪ್ರಮಾಣವನ್ನು, ರಾಜ್ಯ ಸರ್ಕಾರ ಹೆಚ್ಚಿಸಿದೆ ಎಂದು, ತಿಳಿಸಿದ್ದಾರೆ.

<><><>

ರಸಗೊಬ್ಬರದ ಕೊರತೆ ನೀಗಿಸಲು, ಕೃಷಿ ಇಲಾಖೆ ಸಕಾಲಿಕ ಕ್ರಮ ಕೈಗೊಂಡು, ರೈತರಿಗೆ ಯೂರಿಯಾ ರಸಗೊಬ್ಬರ ಪೂರೈಸುತ್ತಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯ ಸ್ವಾಮಿ, ಎಕ್ಸ್ ಮಾಧ್ಯಮದಲ್ಲಿ ಸ್ಪಷ್ಟ ಪಡಿಸಿದ್ದಾರೆ. ಕಳೆದ ಏಪ್ರಿಲ್ ನಿಂದ ಪ್ರಸ್ತುತ ಆಗಸ್ಟ್ ತಿಂಗಳಲ್ಲಿ, 9 ಲಕ್ಷದ 4-7 ಮೆಟ್ರಿಕ್ ಟನ್‌ಗಳಷ್ಟು ಯೂರಿಯಾ ರಸಗೊಬ್ಬರ ಪೂರೈಕೆಯಾಗಿದೆ. 8 ಲಕ್ಷದ 4-9 ಮೆಟ್ರಿಕ್ ಟನ್‌ಗಳಷ್ಟು ಯೂರಿಯಾ ರಸಗೊಬ್ಬರ ರೈತರು ಖರೀದಿಸಿದ್ದಾರೆ ಎಂದು, ಮಾಹಿತಿ ನೀಡಿದ್ದಾರೆ. ಕೃಷಿ ಇಲಾಖೆಯ ಸಂಚಾರಿ ಜಾಗ್ರತ ದಳಗಳು, ಸತತ ಕಾರ್ಯಾಚರಣೆ ನಡೆಸುತ್ತಿವೆ. ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ದಾವಣಗೆರೆಯಲ್ಲಿ, ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ, ಯೂರಿಯಾ ರಸಗೊಬ್ಬರವನ್ನು ಪಶಪಡಿಸಿಕೊಂಡಿದ್ದಾರೆ. ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ, ಎಂದಿದ್ದಾರೆ.

<><><>

ರಸಗೊಬ್ಬರದ ಅಕ್ರಮ ದಾಸ್ತಾನು ಹಾಗೂ ಕಳ್ಳ ಸಾಗಣೆ ತಡೆಗೆ, ಕೇಂದ್ರ ಸರ್ಕಾರ ಅವಶ್ಯಕ ಕ್ರಮ ಕೈಗೊಳ್ಳುತ್ತಿದೆ ಎಂದು, ಕೇಂದ್ರ ರಸಗೊಬ್ಬರ ಖಾತೆ ಸಚಿವ, ಜೆ.ಪಿ. ನಡ್ಡಾ, ಲೋಕಸಭೆಯ ಪ್ರಶ್ನೋತ್ತರ ವೇಳೆ, ಸ್ಪಷ್ಟ ಪಡಿಸಿದ್ದಾರೆ. ದೇಶಾದ್ಯಂತ, ರಾಜ್ಯ ಮಟ್ಟದಲ್ಲಿ, ರಸಗೊಬ್ಬರದ ಸಕಾಲಿಕ ಹಾಗೂ ಸಮರ್ಪಕ ಪೂರೈಕೆ, ರೈತರಿಗೆ ಕ್ಷೇತ್ರ ಮಟ್ಟದಲ್ಲಿ ಸಗಟು ಮತ್ತು ಬಿಡಿ ಮಾರಾಟಗಾರರ ಮೂಲಕ, ಲಭ್ಯತೆ ಖಾತ್ರಿಪಡಿಸುವುದು, ಕೇಂದ್ರ ಹಾಗೂ ರಾಜ್ಯ ಕೃಷಿ-ರಸಗೊಬ್ಬರ ಇಲಾಖೆಗಳ, ಜಂಟಿ ಜವಾಬ್ದಾರಿ, ಎಂದರು.

<><><>

ನರೇಂದ್ರ ಮೋದಿ ಅವರ ಪರಿಕಲ್ಪನೆಯ, ಆತ್ಮನಿರ್ಭರ ಭಾರತ ಸಂಕಲ್ಪದಡಿ, ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕಗಳ ನಿಯಬದ್ಧಗೊಳಿಸುವಿಕೆ, ಪಿ.ಎಂ.ಎಫ್.ಎಂ.ಇ ಯೋಜನೆಯಡಿ, ಫಲಾನುಭವಿ, ಯಶಸ್ವಿ ಗೃಹ ಉದ್ಯಮಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ವೃಂದಾ ಬುರ್ಲಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ವೃಂದಾ ಬುರ್ಲಿ ಧ್ವನಿ 37 ಸೆಕೆಂದುಗಳು

<><><>

ಈಗ ಪ್ರಕಟಣೆ ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಸಹೋದರ–ಸಹೋದರಿಯರ, ಬಾಂಧವ್ಯ, ಸುರಕ್ಷೆ, ವಾತ್ಸಲ್ಯದ ದ್ಯೋತಕವಾದ, ರಕ್ಷಾ ಬಂಧನದ ಸಂಭ್ರಮ, ನಾಡಿನಾದ್ಯಂತ ಕಳೆಗಟ್ಟಿದೆ.ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ ಸೇರಿದಂತೆ, ಗಣ್ಯರು, ನಾಡಿನ ಜನತೆಗೆ, ರಕ್ಷಾ ಬಂಧನದ ಶುಭಾಶಯ ಕೋರಿದ್ದಾರೆ. ಶ್ರಾವಣ ಮಾಸದ, ಹುಣ್ಣಿಮೆ ಈ ದಿನ, ರಕ್ಷಾ ಬಂಧನದ ಮಹತ್ವದ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ, ಬ್ರಹ್ಮಕುಮಾರ ವಿಶ್ವಾಸ ಸೋಹೋನಿ.

<><><>

ವಿಶ್ವಾಸ ಸೋಹೋನಿ ಧ್ವನಿ 63 ಸೆಕೆಂದುಗಳು

<><><>

ರಾಜ್ಯಸಭೆ ಸಂಸದ, ಬೆಳಗಾವಿಯ ಈರಣ್ಣ ಕಡಾಡಿ, ರಕ್ಷಾ ಬಂಧನದ ಶುಭಾಶಯ ಕೋರಿದ್ದು, ಪ್ರಧಾನಮಂತ್ರಿ ಅವರ ಆಶಯದಂತೆ, ವೋಕಲ್ ಫಾರ್ ಲೋಕಲ್ ಕರೆಗೆ ಓಗೊಟ್ಟು, ಸ್ಥಳೀಯವಾಗಿ ತಯಾರಿಸಿದ ರಕ್ಷೆ ಹಾಗೂ ಉಡುಗೊರೆಗಳನ್ನು ಖರೀದಿಸಿ, ಕುಶಲಕರ್ಮಿಗಳನ್ನು ಬೆಂಬಲಿಸೋಣ, ಎಂದು ಮನವಿ ಮಾಡಿದ್ದಾರೆ.

<><><>

ವಿಜಯಪುರ ಜಿಲ್ಲೆ, ವಿಜಯಲಕ್ಷ್ಮೀ ಸರ್ವೋತ್ತಮ ದೇಶಪಾಂಡೆ ಶಿಕ್ಷಣ ಸಂಸ್ಥೆಯ, ವಿಶೇಷ ಚೇತನ ವಿದ್ಯಾರ್ಥಿಗಳು, 500 ರಕ್ಷೆಗಳನ್ನು ತಯಾರಿಸಿದ್ದು, 200 ರಾಖಿಗಳನ್ನು ಜಿಲ್ಲಾಧಿಕಾರಿ ಕಚೇರಿ ಮೂಲಕ, ಪಂಜಾಬ್ ಆರ್ಮಿ ಬೆಟಾಲಿಯನ್ ಗೆ ಕಳುಹಿಸಿ, ಮಾದರಿಯಾಗಿದ್ದಾರೆ.

<><><>

ಆಗಸ್ಟ್ 15, 79ನೇ ಸ್ವಾತಂತ್ರ್ಯ ದಿನಾಚರಣೆಯಂದು, ಜಲಾಂತರ್ಗಾಮಿ ನೌಕೆಗಳಲ್ಲಿ ಬಳಸಲಾದ, ಯುದ್ಧ ವಿಮಾನ, ಟುಪೊಲೆವ್ ಅನ್ನು, ಕಾರವಾರದ ರವೀಂದ್ರನಾಥ ಟ್ಯಾಗೋರ್ ಕಡಲ ತೀರದ, ವಸ್ತು ಸಂಗ್ರಹಾಲಯದಲ್ಲಿ ಅನಾವರಣ ಗೊಳಿಸಿ, ಸಾರ್ವಜನಿಕ ವೀಕ್ಷಣೆಗೆ ಅನುವು ಮಾಡುವುದಾಗಿ, ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಪ್ರವಾಸೋದ್ಯಮ ಇಲಾಖೆ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು.

<><><>

**ರಾಯಚೂರು ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಆರಂಭಗೊಂಡಿರುವ ಅಗ್ನಿವೀರ ಸೇನಾ ನೇಮಕಾತಿ ರ‍್ಯಾಲಿಯು, ಈ ತಿಂಗಳ 26 ನೇ ತಾರೀಖಿನ ವರೆಗೆ ನಡೆಯಲಿದೆ. ರಾಯಚೂರು ನಗರ ಶಾಸಕ ಡಾಕ್ಟರ ಶಿವರಾಜ ಪಾಟೀಲ, ನೇಮಕಾತಿ ಶಿಬಿರಕ್ಕೆ ಚಾಲನೆ ನೀಡಿದರು.**

<><><>

**ರಾಜ್ಯದ ಉತ್ತರ ಒಳನಾಡಿನಲ್ಲಿ ನೈಋತ್ಯ ಮುಂಗಾರು ಚುರುಕಾಗಿದ್ದು, ಮುಂದಿನ ಏಳು ದಿನಗಳ ಕಾಲ ರಾಜ್ಯಾದ್ಯಂತ ಕೆಲವೆಡೆ, ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.**

<><><>

**ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ, ಸುವರ್ಣ ಸಭಾಭವನದಲ್ಲಿ, ಇಂದು ಮಧ್ಯಾಹ್ನ 12 ಗಂಟೆಗೆ, ಶಿವಶರಣ ಶ್ರೀ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮ ಆಯೋಜಿತವಾಗಿದೆ.**

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಬಳ್ಳಾರಿಯಲ್ಲಿ ಮೆಗಾ ಡೇರಿ ಸ್ಥಾಪನೆ; ರಾಜ್ಯ ಗಣಿ ಪರಿಸರ ಪುನಃಶ್ಚೇತನ ನಿಗಮದಿಂದ, ಅನುದಾನ.**

**18 ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ, ರಾಜ್ಯ ಸರ್ಕಾರದಿಂದ, ಬೆಂಬಲ ಬೆಲೆ: 6 ಲಕ್ಷ 11 ಸಾವಿರ ರೈತರಿಗೆ, ಯೋಜನೆ ಲಾಭ.**

**ರೈತರಿಗೆ, ರಸಗೊಬ್ಬರದ ಸಕಾಲಿಕ ಪೂರೈಕೆ ಖಾತ್ರಿ ಪಡಿಸಲು, ಕೃಷಿ ಇಲಾಖೆಯಿಂದ, ಯೋಜಿತ ಕ್ರಮ.**

**ಇಂದು ಶ್ರಾವಣ ಹುಣ್ಣಿಮೆ; ನಾಡಿನಾದ್ಯಂತ ರಕ್ಷಾ ಬಂಧನದ ಸಂಭ್ರಮ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ**

<><><>